# ಬದುಕನ್ನು ಗೆಲ್ಲಿಸಿದವರು



**ಅದು** 2007ನೇ ಇಸವಿಯ ದಿನಗಳು. ನಮಗಿಬ್ಬರು ಹೆಣ್ಣುಮಕ್ಕಳು. ದೊಡ್ಡವಳು ಎಂಜಿನಿಯರ್. ಸಣ್ಣವಳು ಬಿ.ಕಾಂ.ನಲ್ಲಿ ಫೈನಾನ್ಸ್ ತೆಗೆದುಕೊಂಡು ನಾಗಪುರದಲ್ಲಿ ಚಿಕ್ಕಪ್ಪನ ಮನೆಯಲ್ಲಿದ್ದುಕೊಂಡು ಓದುತ್ತಿದ್ದಳು. ಸಿ.ಎಸ್. ಆಕೆಯ ಕನಸು. ಇಬ್ಬರೂ ಬುದ್ಧಿವಂತರಾಗಿದ್ದು, ತಮ್ಮ ತಮ್ಮ ದಾರಿ ಸ್ಪಷ್ಟ ಮಾಡಿಕೊಂಡಿದ್ದರಾದ್ದರಿಂದ ನಾನಂತೂ ಬೀಗಿಹೋಗಿದ್ದೆ, ನನ್ನನ್ಯಾರೂ ಹಿಡಿಯುವವರಿಲ್ಲವೆಂಬಂತೆ. ಆದರೆ ವಿಧಿಯ ಆಟ ಬೇರೆಯೇ ಇತ್ತು.

ಮಂಗಳೂರಿಗೆ ಹೋದೆಡೆ ನನ್ನವರಿಗಾದ ಸಣ್ಣ ಸೊಂಟನೋವು ಪರೀಕ್ಷೆಗೊಳಪಡಿಸಿದಾಗ NHL (ಕ್ಯಾನ್ಸರ್) ಎಂದು ಗುರುತಿಸಲಾಯಿತು. ಕೇಳಿ ದಢಕ್ಕನೆ ಕೆಳಗುರುಳಿದ್ದೆ. ಜೀವನವೇ ಭಾರವಾದಂತೆ, ಅದುವರೆಗೆ ಮನೆಯ ನಾಲ್ಕು ಗೋಡೆಗಳಿಗಷ್ಟೇ ಸೀಮಿತಳಾಗಿದ್ದ ನನ್ನನ್ನು ಕಣ್ಣು ಕಟ್ಟಿ ಕಾಡಿಗೆ ಬಿಟ್ಟಂತಹ ಪರಿಸ್ಥಿತಿ. ಹಣಕಾಸಿನ ಸಾಮಾನ್ಯ ವ್ಯವಹಾರವೂ ಗೊತ್ತಿಲ್ಲದ ನಾನು ಏನು ಮಾಡಬಲ್ಲೆ? ಒಂದು ರೀತಿಯ ನಕಾರಾತ್ಮಕ ಯೋಚನೆ.

ವಯಸ್ಸಿಗೆ ಬಂದ ಹೆಣ್ಣುಮಕ್ಕಳು ಪರ ಊರಿನಲ್ಲಿದ್ದಾರೆ. ಅವರ ಓದು, ವಿವಾಹ ಎಲ್ಲಾ ಹೇಗೋ ಏನೋ... ಕಣ್ಣು ತುಂಬಿಬಂತು. ಜೀವನದಲ್ಲಿ ಮೊದಲ ಬಾರಿ ನನ್ನ ಧೈರ್ಯ ಕಳೆದುಕೊಂಡೆ. ಆದರೂ ನಾನು ಗಟ್ಟಿಯಾಗಿರಬೇಕಿತ್ತು ಮತ್ತು ನನ್ನವರಲ್ಲೂ ಆತ್ಮವಿಶ್ವಾಸ ತುಂಬಬೇಕಿತ್ತು. ಕ್ಯಾನ್ಸರ್ ಚಿಕಿತ್ಸೆಯ ಖರ್ಚು ದುಬಾರಿಯಾಗಿತ್ತು ನಿಜ, ಆದರೆ ನನ್ನವರು ಕೆಲಸ ಮಾಡುತ್ತಿದ್ದ ಬ್ಯಾಂಕ್ ಸಹಾಯಕ್ಕೆ ನಿಂತಿತು. ಒಟ್ಟು 11 ತಿಂಗಳ ಕಾಲ ಕ್ಯಾನ್ಸರ್ ವಿರುದ್ಧ ಭಯಾನಕ ಹೋರಾಟ ನಡೆಸಿ ನನ್ನವರನ್ನು ಗೆಲ್ಲಿಸಿದೆವು. ಆ ಕಠಿಣ ಪರಿಸ್ಥಿತಿಯಿಂದ ನಾವೂ ಗೆದ್ದೆವು.

– ರಾಜಲಕ್ಷ್ಮಿ ವಿ. ಶೆಣೈ

## ನಿಜವಾದ ಪರೀಕ್ಷೆಯೆಂದರೆ...

**ನಾನು** ಒಂದು ಹಳ್ಳಿ ಶಾಲೆಯಲ್ಲಿ ಓದುತ್ತಿದ್ದೆ. ಅಂಬೆಗಾಲಿಕ್ಕುತ್ತ ಎಸ್ಸೆಸ್ಸೆಲ್ಸಿವರೆಗೆ ಬಂದೆ. ಪಾಠಗಳು ಬಹಳ ಕಠಿಣವೆನಿಸುತ್ತಿತ್ತು. ತಲೆಗೆ ಯಾವ ವಿಷಯವೂ ಸರಿಯಾಗಿ ಹತ್ತುತ್ತಿರಲಿಲ್ಲ. ಆಗ ಪ್ರತಿ ಮಾರ್ಚ್, ಸೆಪ್ಟೆಂಬರ್‌ಗೆ ಸಪ್ಲಿಮೆಂಟರಿ ಪರೀಕ್ಷೆಗೆ ಕಟ್ಟುವುದು ಎಂಬ ಪ್ರತೀತಿ ಇತ್ತು. ಒಂದೊಂದು ಪರೀಕ್ಷೆಯಲ್ಲಿ ಒಂದೊಂದೇ ವಿಷಯ ಪಾಸಾಗುತ್ತಿದ್ದೆ.

ಎರಡು ವರ್ಷ ಇದೇ ತರಹ ಕಳೆದೆ. ನನ್ನ ಮನಸ್ಸು ರೋಸಿ ಹೋಗಿತ್ತು. ಮನೆಯಲ್ಲಿ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಳ್ಳುತ್ತಿದ್ದೆ. ಇದೊಂದು ನನ್ನ ಬದುಕಿನ ಪ್ರಶ್ನೆ– ಪರೀಕ್ಷೆ ಎರಡೂ ಆಗಿತ್ತು. ಎಸ್ಸೆಸ್ಸೆಲ್ಸಿ ಪಾಸಾಗದೆ ಯಾವ ಕೆಲಸವೂ ಇಲ್ಲ. ಮುಂದಿನ ವಿದ್ಯಾಭ್ಯಾಸವೂ ಇಲ್ಲ ಎಂಬ ಅಳಲು ನನ್ನನ್ನು ಕಾಡುತ್ತಿತ್ತು. ನನ್ನ ಬದುಕು ಭರವಸೆಯನ್ನು ಕಳೆದುಕೊಂಡಿತ್ತು.

ಆ ಸಮಯದಲ್ಲಿ ನನ್ನ ಗುರುಗಳು ಸಹನೆ ಸಂಯಮದಿಂದ ಪರೀಕ್ಷೆಗಳನ್ನು ಎದುರಿಸುವ ಧೈರ್ಯ ನೀಡಿದರು. ನನ್ನ ಅಂತಃಶಕ್ತಿಯನ್ನು ಬಡಿದೆಬ್ಬಿಸಿದರು. ಮುಂಬರುವ ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಿ ಗಟ್ಟಿಯಾಗಿ ನಿಲ್ಲುವಂತೆ ಮಾಡಿತು. ಮುಂದಿನ ಪರೀಕ್ಷೆಗಳಲ್ಲಿ ನಾನು ತೇರ್ಗಡೆಯಾದೆ. ನನ್ನ ಆನಂದ ಹೇಳತೀರದಾಗಿತ್ತು. ಅದೇ ಛಲದಿಂದ ಕೆಪಿಎಸ್‌ಸಿ ಪರೀಕ್ಷೆಯನ್ನು ಪಾಸು ಮಾಡಿದೆ. ಉದ್ಯೋಗ ಗಿಟ್ಟಿಸಿಕೊಂಡು, ಈಗ ಪಿಂಚಣಿದಾರಳಾಗಿದ್ದೇನೆ. ಆ ಸಂದರ್ಭ ನನ್ನ ಬದುಕಿನ ನಿಜವಾದ ಪರೀಕ್ಷೆಯಾಗಿತ್ತು.

–ಗಾಯತ್ರಿ ಸ್ವಾಮಿ



## ನಮ್ಮ ಸುತ್ತಲಿನ ಸಾಧಕಿಯರು

ನಮ್ಮ ಸುತ್ತಮುತ್ತಲೂ, ಹಲವಾರು ಅಡೆತಡೆಗಳನ್ನು ದಾಟಿ, ತಮ್ಮ ಕ್ಷೇತ್ರಗಳಲ್ಲಿ ಗೆಲುವು ಪಡೆದಿರುವ ಯಶಸ್ವಿನಿಯರು ಇರುತ್ತಾರೆ. ಎಲೆಮರೆ ಕಾಯಿಯಂತೆ ದುಡಿಯುತ್ತಿರುವ ಸಾಧಕಿಯರು ನಿಮ್ಮ ಸುತ್ತಲಿದ್ದರೆ ಸಣ್ಣದೊಂದು ಪರಿಚಯ ಬರೆದು ಕಳುಹಿಸಿ. ಅವರ ಸಂಘರ್ಷ, ಉಳಿದವರಿಗೆ ಸ್ಫೂರ್ತಿಯಾಗಬಹುದು. ಪ್ರೇರಣೆ ನೀಡುವಂಥ ಸಾಧಕಿಯರನ್ನು ಪರಿಚಯಿಸಿದರೆ ಆಯ್ದ ಕೆಲವನ್ನು ಪ್ರಕಟಿಸಲಾಗುವುದು. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಗಳ ಮಿತಿಯಲ್ಲಿರಲಿ. ಕೊನೆಯ ದಿನಾಂಕ ಏಪ್ರಿಲ್ 2. ಇಮೇಲ್–**editorsu@sudha.co.in**

